
Digital India
Power To Empower
सत्यमेव जयते
Ministry of Electronics and Information Technology
Government of India
CSC
e-Governance Services India Limited
ನಗದುರಹಿತರಾಗಿ..
ಡಿಜಿಟಲ್ ಆಗಿ..
ಸಿಎಸ್‌ಸಿ ಡಿಜಿಟಲ್ ಆರ್ಥಿಕ ಸೇರ್ಪಡೆ ಮೂಲಕ ಮೂಲಕ ಜಾಗೃತಿ ಮತ್ತು
ಪ್ರವೇಶಿಸುವಿಕೆ
UPI
ಯುಪಿಐ
USSD
ಯುಎಸ್ಎಸ್ಡಿ
E-Wallet
ಇ–ವ್ಯಾಲೆಟ್
AADHAAR
ಆಧಾರ್ ಆಧಾರಿತ
ಪಾವತಿ ವ್ಯವಸ್ಥೆ
ಕಾರ್ಡ್‌ಗಳು.
ಪಿಒಎಸ್

# ಸಿಎಸ್‌ಸಿ ಇ–ಗವರ್ನೆನ್ಸ್ ಸರ್ವೀಸಸ್ ಇಂಡಿಯ ಲಿಮಿಟೆಡ್.

**ಡಿಜಿಟಲ್ ವಿತ್ತೀಯ ಅರಿವು ಹಾಗೂ ಲಭ್ಯತೆಯ ಕಿರುಪುಸ್ತಕ**

## Contents


1. ಪ್ರಸ್ತಾವನೆ ........ 4

2. ಸಾಮಾನ್ಯ ಸೇವಾ ಕೇಂದ್ರಗಳು (ಸಿಎಸ್‌ಸಿ): ಒಂದು ಪರಿಚಯ ........ 4

3. ಮಾಹಿತಿ ಪ್ರಸರಣದ ವಿಧಾನ: ........ 5

4. ಡಿಜಿಟಲ್ ಹಣಕಾಸು ಸೇವೆಗಳು ........ 6

4.1. ಕಾರ್ಡ್‌ಗಳು ........ 7

4.1.1. ಕಾರ್ಡ್‌ಗಳೆಂದರೇನು? ........ 7

4.1.2. ವಿವಿಧ ರೀತಿಯ ಕಾರ್ಡ್‌ಗಳು ಯಾವುವು? ........ 7

4.1.3. ಡೆಬಿಟ್/ ಕ್ರೆಡಿಟ್ ಕಾರ್ಡ್‌ಗಳನ್ನು ಬಳಸುವುದು ಹೇಗೆ? ........ 8

4.1.4. ನಾನು ಈ ಕಾರ್ಡ್‌ಗಳನ್ನು ಏಕೆ ಬಳಸಬೇಕು? ........ 8

4.1.5. ಕಾರ್ಡ್ ಪಡೆಯುವುದು ಹೇಗೆ? ........ 9

4.2. ಯುಎಸ್‌ಎಸ್‌ಡಿ (ಅನ್‌ಸ್ಟ್ರಕ್ಚರ್ಡ್ ಸಪ್ಲಿಮೆಂಟರಿ ಸರ್ವೀಸ್ ಡೇಟಾ) ........ 9

4.2.1. ಯುಎಸ್‌ಎಸ್‌ಡಿ ಎಂದರೇನು? ........ 9

4.2.2. ನಿಮಗೆ ಏನು ಬೇಕು? ........ 9

4.2.3. ನಾನದನ್ನು ಹೇಗೆ ಬಳಸಬಹುದು ? ........ 10

4.2.4. ಯುಎಸ್‌ಎಸ್‌ಡಿಯ ಲಾಭಗಳೇನು? ........ 10

4.2.5. ಯುಎಸ್‌ಎಸ್‌ಡಿ ಬಳಸುವ ಕ್ರಮ ........ 10

4.2.6. ಲಭ್ಯವಿರುವ ಸೇವೆಗಳು: ........ 11

4.3. ಎಇಪಿಎಸ್ (ಆಧಾರ್ ಆಧಾರಿತ ಪಾವತಿ ವ್ಯವಸ್ಥೆ) ........ 11

4.3.1. ಎಇಪಿಎಸ್ ಎಂದರೇನು? ........ 12

4.3.2. ಎಇಪಿಎಸ್ ಚಾಲನೆ ಮಾಡಲು ನಾನು ಏನು ಮಾಡಬೇಕು? ........ 12

4.3.3. ನಾನು ಇದನ್ನು ಏಕೆ ಬಳಸಬೇಕು? ........ 12

4.3.4. ಎಇಪಿಎಸ್ ವ್ಯವಹಾರಕ್ಕೆ ಈ ಕೆಳಗಿನ ಕ್ರಮಗಳನ್ನು ಅನುಸರಿಸಿ: ........ 12

4.3.5. ನಾನಿದನ್ನು ಏಕೆ ಬಳಸಬೇಕು? ........ 13

4.4. ಯುಪಿಐ (ಯುನಿಫೈಡ್ ಪೇಮೆಂಟ್ಸ್ ಇಂಟರ್‌ಫೇಸ್) ........ 13

4.4.1. ಯುಪಿಐ ಎಂದರೇನು? ........ 13

4.4.2. ನಿಮಗೆ ಏನು ಬೇಕು? ........ 14

4.4.3. ಇದು ಹೇಗೆ ಕೆಲಸ ಮಾಡುತ್ತದೆ? ........ 14
4.4.4. ಇದರ ವೈಶಿಷ್ಟ್ಯ ಹಾಗೂ ಲಾಭಗಳೇನು? ........ 14
4.5. ಇ–ವ್ಯಾಲೆಟ್ ........ 15
4.5.1. ಇ–ವ್ಯಾಲೆಟ್ ಎಂದರೇನು? ........ 15
4.5.2. ಇ–ವ್ಯಾಲೆಟ್‌ನ ವೈಶಿಷ್ಟ್ಯಗಳು ........ 16
4.5.3. ಇದು ಹೇಗೆ ಕೆಲಸ ಮಾಡುತ್ತದೆ? ........ 16
4.5.4. ನಾನು ಇ–ವ್ಯಾಲೆಟ್ ಹೇಗೆ ಬಳಸಬಹುದು? ........ 16
5. ಯೋಜನೆಯಲ್ಲಿ ವಿಎಲ್‌ಇಗಳು ಹಾಗೂ ಅವರ ಪಾತ್ರ: ........ 17
5.1. ವಿಎಲ್‌ಇ ಸಮಾಜದ ಪಾತ್ರ ........ 18
5.2. ಪ್ರೋತ್ಸಾಹಧನ ........ 18
5.3. ವಿಎಲ್‌ಇಗಳಿಗೆ ಸಲಹೆಗಳು ........ 19
6. ಬೆಂಬಲ ........ 19
ವಿಎಲ್‌ಇಗಳು ಬಳಸಬೇಕಿರುವ ಬ್ಯಾನರ್: ........ 19

## 1. ಪ್ರಸ್ತಾವನೆ

ಭಾರತವು ಅಭಿವೃದ್ಧಿ ಹೊಂದುತ್ತಿರುವ ಆರ್ಥಿಕತೆಯಾಗಿದ್ದು, ಸುಸ್ಥಿರ ಅಭಿವೃದ್ಧಿಯತ್ತ ಕೇಂದ್ರಿತವಾಗಿದೆ. ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸಲು, ಸಮಾಜದ ಎಲ್ಲಾ ವರ್ಗಗಳು ರಾಷ್ಟ್ರ ನಿರ್ಮಾಣದಲ್ಲಿ ಸಮಾನ ಅವಕಾಶಗಳನ್ನು ಹೊಂದುವುದು ಹಾಗೂ ಭಾಗವಹಿಸುವುದು ಬಹುಮುಖ್ಯವಾಗಿದೆ.

ವಿಶೇಷವಾಗಿ ಗ್ರಾಮೀಣ ಜನರಲ್ಲಿ ಡಿಜಿಟಲ್ ಆರ್ಥಿಕ ಸಾಕ್ಷರತೆಯ ಅರಿವಿನ ಕೊರತೆ, ದೇಶದಲ್ಲಿ ಪ್ರಮುಖ ಸವಾಲಾಗಿದ್ದು, ಸರ್ಕಾರದ ಇತ್ತೀಚಿನ ಅಪನಗದೀಕರಣ ಮತ್ತು ಇತರ ಯೋಜನೆಗಳು ಭಾರತವನ್ನು ನಗದುರಹಿತ ಆರ್ಥಿಕತೆಯತ್ತ ಕೊಂಡೊಯ್ಯುತ್ತಿವೆ. ವಿಶೇಷವಾಗಿ ಗ್ರಾಮೀಣ ಮತ್ತು ಅರೆ–ನಗರ ಪ್ರದೇಶಗಳಲ್ಲಿ, ಡಿಜಿಟಲ್ ಹಣಕಾಸು ಸೇವೆಗಳ ಬಗ್ಗೆ ನಾಗರಿಕರಲ್ಲಿ ಜಾಗೃತಿ ಮೂಡಿಸುವ ತುರ್ತು ಅಗತ್ಯವಿದ್ದು, ಹಾಗೆಯೇ ಡಿಜಿಟಲ್ ಹಣಕಾಸು ಸೇವೆಗಳ ಆಯ್ಕೆಯ ಲಭ್ಯತೆಯನ್ನು ಆರಂಭಿಸುವ /ಬೆಂಬಲಿಸುವ ಅಗತ್ಯವಿದೆ.

ಈ ಯೋಜನೆಯ ಗುರಿ ಎಂದರೆ 25 (ಇಪ್ಪತ್ತೈದು) ಲಕ್ಷ ವ್ಯಾಪಾರಿಗಳು ಮತ್ತು 1 (ಒಂದು) ಕೋಟಿ ನಾಗರಿಕರಿಗೆ, ದೇಶದ 2,50,000 ಪಂಚಾಯಿತಿಗಳಲ್ಲಿನ 2,00,000 ವಿಎಲ್ಇಗಳ ಸಹಾಯದಿಂದ ಡಿಜಿಟಲ್ ಹಣಕಾಸು ಸಾಕ್ಷರತೆ ಒದಗಿಸುವುದಾಗಿದೆ. ಇದರ ಉದ್ದೇಶ, ಗ್ರಾಮೀಣ ನಾಗರಿಕರಿಗೆ ಲಭ್ಯವಿರುವ ಸರ್ಕಾರದ ನೀತಿಗಳು ಮತ್ತು ಡಿಜಿಟಲ್ ಹಣಕಾಸು ಆಯ್ಕೆಗಳ ಬಗ್ಗೆ ಜಾಗೃತಿ ಅಧಿವೇಶನಗಳನ್ನು ಆಯೋಜಿಸುವ ಮೂಲಕ ಹಾಗೂ ವಿವಿಧ ಪಾಲುದಾರರ ಡಿಜಿಟಲ್ ಹಣಕಾಸು ಸೇವೆಗಳಾದ ಐಎಂಪಿಎಸ್, ಯುಪಿಐ, ಬ್ಯಾಂಕ್ ಪಿಒಎಸ್ ಯಂತ್ರಗಳು ಇತ್ಯಾದಿಗಳ ಬಳಕೆಯನ್ನು ಬೆಂಬಲಿಸುವ ಮೂಲಕ, ಸಿಎಸ್‌ಸಿಗಳ ಸಶಕ್ತಿಕರಣಗೊಳಿಸಿ ಡಿಜಿಟಲ್ ಹಣಕಾಸು ಕೇಂದ್ರಗಳನ್ನಾಗಿಸುವುದಾಗಿದೆ. ನಾಗರಿಕರಿಗೆ ಎಲೆಕ್ಟ್ರಾನಿಕ್ ಪೇಮೆಂಟ್ ಸಿಸ್ಟಂ(ಇಪಿಎಸ್)ನ ಲಭ್ಯತೆ ಮತ್ತು ಬಳಕೆಯ ಬಗ್ಗೆ ಸಶಕ್ತಿಕರಣಗೊಳಿಸುವುದರತ್ತ ಹಾಗೂ ಪಂಚಾಯಿತಿ ಮಟ್ಟದಲ್ಲಿ ವ್ಯಾಪಾರಿಗಳನ್ನು ಇಪಿಎಸ್ ಬಳಕೆಯ ಬಗ್ಗೆ ಸಂವೇದನಾಶೀಲರಾಗಿಸಿ, ಬೆಂಬಲಿಸಿ, ಗ್ರಾಮೀಣ ಭಾರತದಲ್ಲಿ ಜಾಗೃತಿ ಮೂಡಿಸುವುದರತ್ತ ಈ ಯೋಜನೆಯ ಗಮನ ಕೇಂದ್ರಿತವಾಗಿದೆ.

ಡಿಜಿಟಲ್ ಹಣಕಾಸು ಸಾಕ್ಷರತೆಯನ್ನು ಸಾಧಿಸಲು ಇರುವ ಹೆಜ್ಜೆಗಳೆಂದರೆ:




ಈ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುವ ಸಂಸ್ಥೆ ಸಿಎಸ್‌ಸಿ ಇ–ಗವರ್ನೆನ್ಸ್ ಸರ್ವೀಸಸ್ ಇಂಡಿಯಾ ಲಿಮಿಟೆಡ್ ಆಗಿದೆ. ಇದೊಂದು ಭಾರತ ಸರಕಾರ ಸ್ಥಾಪಿಸಿದ ವಿಶೇಷ ಉದ್ದೇಶದ ವಾಹನ (ಎಸ್‌ಪಿವಿ) ಆಗಿದೆ. ಸಿಎಸ್‌ಸಿ–ಎಸ್‌ಪಿವಿ ತನ್ನ ಸಾಮಾನ್ಯ ಸೇವಾ ಕೇಂದ್ರಗಳ(ಸಿಎಸ್‌ಸಿ) ಜಾಲದ ಮೂಲಕ, ತನಗೆ ಬೇಕಾದ ಮೂಲಭೂತ ಸೌಕರ್ಯ ಹಾಗೂ ಇಂತಹ ಉಪಕ್ರಮಗಳನ್ನು, ತಂತ್ರಜ್ಞಾನ ಬಳಕೆಯ ಮೂಲಕ ದೇಶದಾದ್ಯಂತ ಕೈಗೊಳ್ಳುವ ಸಾಮರ್ಥ್ಯ ಹೊಂದಿದೆ.

## 2. ಸಾಮಾನ್ಯ ಸೇವಾ ಕೇಂದ್ರಗಳು (ಸಿಎಸ್‌ಸಿ): ಒಂದು ಪರಿಚಯ

ಸಾಮಾನ್ಯ ಸೇವೆಗಳು ಕೇಂದ್ರಗಳು(ಸಿಎಸ್‌ಸಿಗಳು), ದೇಶದ ದೂರದ ಗ್ರಾಮೀಣ ಮತ್ತು ಅರೆ–ನಗರ ಪ್ರದೇಶಗಳಲ್ಲಿ ವಿವಿಧ ಇ–ಆಡಳಿತ ಮತ್ತು ವ್ಯಾಪಾರ ಸೇವೆಗಳನ್ನು ನಾಗರಿಕರಿಗೆ ಒದಗಿಸುವ ಸೌಲಭ್ಯ ಕೇಂದ್ರಗಳಾಗಿವೆ. ಇದೊಂದು ದೇಶದಾದ್ಯಂತ ವಿಸ್ತರಿಸಿರುವ ಜಾಲವಾಗಿದ್ದು, ದೇಶದ ಪ್ರಾದೇಶಿಕ, ಭೌಗೋಳಿಕ, ಭಾಷಾ ಮತ್ತು ಸಾಂಸ್ಕೃತಿಕ ವೈವಿಧ್ಯತೆಗೆ ಅನುಕೂಲಕರವಾಗಿದೆ, ಹೀಗೆ ಇದು ಸರ್ಕಾರದ ಆದೇಶವನ್ನು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಡಿಜಿಟಲ್ ಆಗಿ ಸಮಾಜದಲ್ಲಿ ಸಕ್ರಿಯಗೊಳಿಸುತ್ತದೆ.

ತಂತ್ರಜ್ಞಾನವು, ವಿಶೇಷವಾಗಿ ಗ್ರಾಮೀಣ ಭಾರತದ ದೊಡ್ಡ ಸಂಖ್ಯೆಯ ಜನರ ಬಳಿ ತಲುಪಬಹುದಾದ ಪ್ರಮುಖ ಮಾರ್ಗಗಳಲ್ಲಿ ಒಂದಾಗಿದೆ. ಸಾಮಾನ್ಯ ಸೇವಾ ಕೇಂದ್ರಗಳು (ಸಿಎಸ್‌ಸಿ) ದೇಶದ ಗ್ರಾಮಾಂತರ ಮತ್ತು ದೂರದ ಪ್ರದೇಶಗಳಲ್ಲಿ ನಾಗರಿಕರಿಗೆ ಸರ್ಕಾರ ಮತ್ತು ಸಾರ್ವಜನಿಕ ಸೇವೆಗಳನ್ನು ಒದಗಿಸುವ ಕೊನೆಯ ಹಂತದ ವಿತರಣಾ ಕೇಂದ್ರಗಳಾಗಿವೆ. ಅವುಗಳ ವಿಸ್ತಾರ ಹಾಗೂ ಐಸಿಟಿ ಮೂಲಸೌಕರ್ಯದ ಲಭ್ಯತೆಯ ಕಾರಣ, ಸಿಎಸ್‌ಸಿಗಳಿಗೆ ಗ್ರಾಮೀಣ ಮತ್ತು ದೂರದ ಪ್ರದೇಶಗಳಲ್ಲಿ, ಬ್ಯಾಂಕ್ ಖಾತೆಗಳ ತೆರೆಯುವಿಕೆ, ಬ್ಯಾಂಕಿಂಗ್ ಸೌಲಭ್ಯ, MGNREGS ವಿತರಣೆ ಹಾಗೂ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳು, ವಿಮೆ ಮತ್ತು ಪಿಂಚಣಿ ಇತ್ಯಾದಿಗಳ ಮೂಲಕ ಆರ್ಥಿಕ ಸೇರ್ಪಡೆಯನ್ನು ಹರಡುವ ಆದೇಶ ನೀಡಲಾಗಿದೆ. ಹಾಗೆಯೇ ಗ್ರಾಮೀಣ ಜನತೆಯಲ್ಲಿ ಡಿಜಿಟಲ್ ಹಣಕಾಸು ಸೇವೆಗಳ ಬಗ್ಗೆ ಅರಿವು ಮೂಡಿಸಿ ಅವರನ್ನು ಸಾಂಪ್ರದಾಯಿಕ ಆರ್ಥಿಕ ವ್ಯವಸ್ಥೆಗೆ ತರುವಹಾಗೆ ಸಿಎಸ್‌ಸಿಗಳನ್ನು ಮೇಲ್ದರ್ಜೆಗೇರಿಸಬಹುದು.

ಯೋಜನೆಯನ್ನು ಯಶಸ್ವಿಯಾಗಿ ಜಾರಿಗೊಳಿಸಲು, ಸಿಎಸ್‌ಸಿ–ಎಸ್‌ಪಿವಿ ಈ ಕೆಳಗಿನ ಚಟುವಟಿಕೆಗಳನ್ನು ದೇಶದಾದ್ಯಂತ ನಡೆಸುತ್ತದೆ:

- ಜಾಗೃತಿ ಮೂಡಿಸಲು ಕಾರ್ಯಾಗಾರಗಳನ್ನು ಆಯೋಜಿಸುವುದು
- ಸಮುದಾಯಗಳು ಹಾಗೂ ಸಿಎಸ್‌ಸಿಗಳ ಪರಸ್ಪರ ಮಾತುಕತೆ
- ಸ್ಥಳೀಯ ಮುಖಂಡರು/ ಅಭಿಪ್ರಾಯ ನೀಡುವವರನ್ನು ಒಳಪಡಿಸುವುದು
- ಶಾಲೆ/ಕಾಲೇಜುಗಳಲ್ಲಿ ಮಾತುಕತೆ ನಡೆಸುವುದು
- ಅರೆ–ನಗರ ಪಾಲಿಕೆಗಳನ್ನು ಒಳಪಡಿಸುವುದು
- ಸ್ಪರ್ಧೆಗಳ ಆಯೋಜನೆ
- ರೇಡಿಯೋ/ ಟಿ.ವಿ ಸಂಭಾಷಣೆ ಕಾರ್ಯಕ್ರಮಗಳು

### 3. ಮಾಹಿತಿ ಪ್ರಸರಣದ ವಿಧಾನ:




ಯೋಜನೆಯು ರಾಜ್ಯ ಸರ್ಕಾರಿ/ ಜಿಲ್ಲಾಡಳಿತದ **ಸರ್ಕಾರಿ ಕಾರ್ಯಕರ್ತರು**; ಎನ್‌ಐಸಿ–ಎಸ್‌ಐಒ/ ಡಿಐಒ; ಬ್ಯಾಂಕುಗಳು; ಹಾಗೂ ಪಂಚಾಯಿತಿಗಳನ್ನು ಒಳಗೊಂಡಿರುತ್ತದೆ. ಹಾಗೆಯೇ ವ್ಯಾಪಾರಿ ಒಕ್ಕೂಟಗಳು; ಮಾರುಕಟ್ಟೆ ಸಂಘಟನೆಗಳು; ವ್ಯಾಪಾರಿಗಳು/ ವರ್ತಕರು ಇತ್ಯಾದಿ **ಸಂಘಟನೆಗಳನ್ನು** ಒಳಗೊಂಡಿರುತ್ತದೆ. ಹಾಗೂ **ಸಮುದಾಯಗಳಾದ** ಅರೆ–ನಗರ/ಗ್ರಾಮೀಣ ಜನತೆ; ಶಾಲೆಗಳು/ಕಾಲೇಜುಗಳು ಹಾಗೂ ಮಹಿಳೆಯರು, ರೈತರು ಮತ್ತು ಹಿಂದುಳಿದ ವರ್ಗಗಳನ್ನು ಒಳಗೊಂಡಿರುತ್ತದೆ.

ಈ ಕೈಪಿಡಿಯ ಉದ್ದೇಶವೆಂದರೆ, ಬಳಕೆದಾರರಿಗೆ ದೇಶದ ಸಾಮಾನ್ಯ ಜನರು ಬಳಸಬಹುದಾದ ಡಿಜಿಟಲ್ ಹಣಕಾಸು ಸೇವೆಗಳ ಪರಿಕಲ್ಪನೆಗಳು ಮತ್ತು ಅದರ ಪ್ರಕಾರಗಳನ್ನು ತಿಳಿಸುವುದಾಗಿದೆ.

## 4. ಡಿಜಿಟಲ್ ಹಣಕಾಸು ಸೇವೆಗಳು


ಡಿಜಿಟಲ್ ಹಣಕಾಸು ಒಳಗೊಳ್ಳುವಿಕೆ ಎಂದರೆ ಸಮಾಜದ ಸೌಲಭ್ಯ ವಂಚಿತ ಹಾಗೂ ಹಿಂದುಳಿದ ವರ್ಗಗಳು ಸಾಮಾನ್ಯ ಆರ್ಥಿಕ ಸೇವೆಗಳನ್ನು ಬಳಸುವ ಸಲುವಾಗಿ ಇರುವ ಡಿಜಿಟಲ್ ಪ್ರವೇಶದ್ವಾರವಾಗಿದೆ. ಈ ಉದ್ದೇಶವನ್ನು ಪೂರೈಸಲು ಪರಿಚಯಿಸಲಾಗುತ್ತಿರುವ ಸೇವೆಗಳನ್ನು ಡಿಜಿಟಲ್ ಹಣಕಾಸು ಸೇವೆಗಳು (ಡಿಎಫ್ಎಸ್) ಎನ್ನಲಾಗುತ್ತದೆ. ಇವುಗಳನ್ನು ಗ್ರಾಹಕರ ಅಗತ್ಯಗಳಿಗೆ ತಕ್ಕಂತೆ ವಿನ್ಯಾಸಗೊಳಿಸಲಾಗಿದ್ದು, ಗ್ರಾಹಕರಿಗೆ ಹಾಗೂ ಪೂರೈಕೆದಾರರಿಗೆ ಇಬ್ಬರಿಗೂ ಕೈಗೆಟಕುವಂತೆ ಹಾಗೂ ಆಧಾರವಾಗುವಂತೆ ಒದಗಿಸಲಾಗುತ್ತಿದೆ. ಇಂತಹ ಡಿಜಿಟಲ್ ಹಣಕಾಸು ಸೇವೆಗಳ ಮೂರು ಮುಖ್ಯ ಘಟಕಗಳಿವೆ: ವೇದಿಕೆ, ಚಿಲ್ಲರೆ ವ್ಯಾಪಾರಸ್ಥರು, ಹಾಗೂ ಗ್ರಾಹಕರು ಮತ್ತು ಸಾಧನದ ಏಜಂಟ್‌ಗಳ ಬಳಕೆ. ಇದು ಸಾಮಾನ್ಯವಾಗಿ ವೇದಿಕೆಯಲ್ಲಿ ವ್ಯವಹರಿಸಲು ಬಳಸಲಾಗುವ ಮೊಬೈಲ್ ಫೋನ್.

ಇದು ಡಿಜಿಟಲ್ ವಾಹಿನಿಗಳ ಮೂಲಕ *ಬ್ಯಾಂಕ್ ಖಾತೆಯಿಲ್ಲದ* ಜನರು ಹೆಚ್ಚಾಗಿ ಆರ್ಥಿಕ ಸೌಲಭ್ಯಗಳನ್ನು ಪಡೆಯುತ್ತಿರುವ ಒಂದು ದಾರಿಯಾಗಿದೆ. ಬ್ಯಾಂಕುಗಳು, ಮೈಕ್ರೊಫೈನಾನ್ಸ್ ಸಂಸ್ಥೆಗಳು, ಮೊಬೈಲ್ ಸೇವಾದಾರರು ಹಾಗೂ ಥರ್ಡ್ ಪಾರ್ಟಿ ಪೂರೈಕೆದಾರರು – ಮೊಬೈಲ್ ಫೋನ್ಸ್, ಪಾಯಿಂಟ್ ಆಫ್ ಸೇಲ್ ಸಾಧನಗಳು ಹಾಗೂ ಸಣ್ಣ ಸ್ತರದ ಏಜಂಟ್‌ಗಳ ಜಾಲದ ಉಪಯೋಗ ಮಾಡಿಕೊಂಡು ಸಾಂಪ್ರದಾಯಿಕ ಬ್ಯಾಂಕುಗಳಿಗಿಂತ ಕಡಿಮೆ ಖರ್ಚಿನಲ್ಲಿ ದೊಡ್ಡ ಸ್ತರದಲ್ಲಿ ಹಾಗೂ ಹೆಚ್ಚಿನ ಅನುಕೂಲತೆಯಿಂದ ಮೂಲಭೂತ ಹಣಕಾಸು ಸೇವೆಗಳನ್ನು ಒದಗಿಸುತ್ತಿದ್ದಾರೆ.

ಈ ಕೈಪಿಡಿಯಲ್ಲಿ ಚರ್ಚಿಸಲಾಗಿರುವ ಪ್ರಮುಖ ಡಿಎಫ್ಎಸ್ ಪ್ರಕಾರಗಳೆಂದರೆ:

1. **ಕಾರ್ಡ್‌ಗಳು**
2. **ಯುಎಸ್‌ಎಸ್‌ಡಿ**
3. **ಎಇಪಿಎಸ್**
4. **ಯುಪಿಐ**
5. **ವ್ಯಾಲೆಟ್**

## 4.1. ಕಾರ್ಡ್‌ಗಳು




### 4.1.1. ಕಾರ್ಡ್‌ಗಳೆಂದರೇನು?

ಇವು ಸಾಮಾನ್ಯವಾಗಿ ಬ್ಯಾಂಕುಗಳಲ್ಲಿ ಲಭ್ಯವಿದ್ದು, ಕಾರ್ಡ್ ಹೊಂದಿರುವವರಿಂದ ಅವುಗಳ ಹೊರಡಿಸುವಿಕೆ, ಬಳಕೆ ಹಾಗೂ ಪಾವತಿಯ ಆಧಾರದಲ್ಲಿ ವರ್ಗೀಕೃತಗೊಂಡಿವೆ. ಮೂರು ಪ್ರಮುಖ ಪ್ರಕಾರದ ಕಾರ್ಡ್‌ಗಳಿವೆ: ಡೆಬಿಟ್ ಕಾರ್ಡ್‌ಗಳು, ಕ್ರೆಡಿಟ್ ಕಾರ್ಡ್‌ಗಳು ಹಾಗೂ ಪ್ರೀಪೇಡ್ ಕಾರ್ಡ್‌ಗಳು.

### 4.1.2. ವಿವಿಧ ರೀತಿಯ ಕಾರ್ಡ್‌ಗಳು ಯಾವುವು?


1. **ಪ್ರೀಪೇಡ್ ಕಾರ್ಡ್‌ಗಳು:** ಇವು ಗ್ರಾಹಕರ ಬ್ಯಾಂಕ್ ಖಾತೆಗಳಿಂದ ಮೊದಲೇ ತುಂಬಲ್ಪಟ್ಟಿರುತ್ತವೆ. ಇವುಗಳನ್ನು ಒಂದು ನಿಗದಿತ ಮೊತ್ತದ ವ್ಯವಹಾರಗಳಿಗೆ ಬಳಸಬಹುದಾಗಿದೆ. ಇವುಗಳನ್ನು ಮೊಬೈಲಿನಂತೆ ರೀಚಾರ್ಜ್ ಮಾಡಬಹುದು ಹಾಗೂ ಬಳಕೆಯಲ್ಲಿ ಸುರಕ್ಷಿತವಾಗಿವೆ.

2. **ಡೆಬಿಟ್ ಕಾರ್ಡ್‌ಗಳು:** ನೀವು ಖಾತೆಯನ್ನು ಹೊಂದಿದ ಬ್ಯಾಂಕ್ ಇದನ್ನು ಹೊರಡಿಸುತ್ತದೆ. ಬ್ಯಾಂಕ್ ಖಾತೆಯೊಂದಿಗೆ ಲಿಂಕ್ ಆಗಿರುತ್ತದೆ. ಡೆಬಿಟ್ ಕಾರ್ಡ್‌ಗಳನ್ನು ಖಾತೆ ಹೊಂದಿರುವವರಿಗೆ (ಚಾಲ್ತಿ/ ಉಳಿತಾಯ /ಓವರ್‌ಡ್ರಾಫ್ಟ್) ನೀಡಲಾಗುತ್ತದೆ, ಹಾಗೂ ಇದರಿಂದ ಮಾಡಲ್ಪಟ್ಟ ಯಾವುದೇ ವೆಚ್ಚ ಕೂಡಲೇ ಬಳಕೆದಾರನ ಖಾತೆಯಿಂದ ಕಳೆಯಲ್ಪಡುತ್ತದೆ. ಬಳಕೆದಾರ ಅವನ/ಅವಳ ಬ್ಯಾಂಕ್ ಖಾತೆಯಲ್ಲಿನ ಮಿತಿಯವರೆಗೆ ನಗದನ್ನು ಪಡೆಯಬಹುದು. ಬಳಸಬಹುದು. ಇದನ್ನು ಒಬ್ಬ ವ್ಯಕ್ತಿಯಿಂದ ಇನ್ನೊಬ್ಬನಿಗೆ ಕೇವಲ ದೇಶೀಯ ನಿಧಿ ವರ್ಗಾವಣೆಗೆ ಕೂಡಾ ಬಳಸಬಹುದು.

3. **ಕ್ರೆಡಿಟ್ ಕಾರ್ಡ್‌ಗಳು:** ಇವುಗಳನ್ನು ಬ್ಯಾಂಕುಗಳು/ ಆರ್‌ಬಿಐ ಅನುಮೋದಿತ ಇತರ ಸಂಸ್ಥೆಗಳು ಹೊರಡಿಸುತ್ತವೆ. ದೇಶೀಯ ಹಾಗೂ ಅಂತರಾಷ್ಟ್ರೀಯವಾಗಿ ಬಳಸಬಹುದು (ಅಂತರಾಷ್ಟ್ರೀಯ ಬಳಕೆಯನ್ನು ಸಮರ್ಥಿಸುವಂತಿದ್ದರೆ). ಕ್ರೆಡಿಟ್ ಕಾರ್ಡ್‌ಗಳಲ್ಲಿ ಗ್ರಾಹಕರು ಬ್ಯಾಂಕ್ ಖಾತೆಯಲ್ಲಿ ಇರುವ ಮೊತ್ತಕ್ಕಿಂತ ಹೆಚ್ಚು ಹಣ ಪಡೆಯಬಹುದಾಗಿದೆ. ಆದರೆ ಪ್ರತೀ ಕ್ರೆಡಿಟ್ ಕಾರ್ಡ್‌ಗೆ ಹೆಚ್ಚು ಹಣ ಪಡೆಯುವ ಒಂದು ಮಿತಿ ಇರುತ್ತದೆ. ಹಾಗೂ ಪಡೆದ ಹೆಚ್ಚಿನ ಹಣವನ್ನು ಬ್ಯಾಂಕ್‌ಗೆ ಹಿಂದಿರುಗಿಸಲು ನಿಗದಿತ ಕಾಲಾವಕಾಶವಿರುತ್ತದೆ. ಈ ಮೊತ್ತವನ್ನು ಕಾರ್ಡ್ ಒದಗಿಸಿದವರು ವಿಧಿಸಿದ ಬಡ್ಡಿದರದೊಂದಿಗೆ ಬ್ಯಾಂಕ್‌ಗೆ ಹಿಂದಿರುಗಿಸಬೇಕು, ಇದರಲ್ಲಿ ತಡವಾದರೆ ಬಡ್ಡಿದರ ಹೆಚ್ಚುತ್ತದೆ.

### 4.1.3. ಡೆಬಿಟ್/ ಕ್ರೆಡಿಟ್ ಕಾರ್ಡ್‌ಗಳನ್ನು ಬಳಸುವುದು ಹೇಗೆ?

1. ಎಟಿಎಂನಿಂದ ಹಣ ಪಡೆಯಲು, ಬಳಕೆದಾರ ಅವನ/ಅವಳ ಡೆಬಿಟ್ ಕಾರ್ಡನ್ನು ಯಂತ್ರದೊಳಗೆ ಹಾಕಿ, ಬ್ಯಾಂಕ್ ಕೊಟ್ಟಂತಹ ತನ್ನ ವಿಶಿಷ್ಟ ಪಿನ್ ಸಂಖ್ಯೆಯನ್ನು (4 ಅಂಕೆಗಳು) ನಮೂದಿಸಬೇಕು. ದಿನವೊಂದರಲ್ಲಿ ಪಡೆಯಬಹುದಾದ ಅತೀ ಹೆಚ್ಚಿನ ಮೊತ್ತದ ಮಿತಿಯನ್ನು ಬ್ಯಾಂಕ್ ನಿಗದಿಗೊಳಿಸುತ್ತದೆ.
2. ಡೆಬಿಟ್ ಕಾರ್ಡ್‌ನೊಂದಿಗೆ, ಬಳಕೆದಾರ ಎಟಿಎಂಅನ್ನು ಇತರ ಆರ್ಥಿಕ ಹಾಗೂ ಆರ್ಥಿಕವಲ್ಲದ ವ್ಯವಹಾರಗಳಿಗೂ ಬಳಸಬಹುದು. ಉದಾಹರಣೆಗೆ ಬ್ಯಾಂಕ್ ಬ್ಯಾಲನ್ಸ್ ಪತ್ತೆಹಚ್ಚುವುದು, ಚೆಕ್ ಅಥವಾ ಹಣ ಜಮೆ ಮಾಡುವುದು, ಮಿನಿ ಸ್ಟೇಟ್‌ಮೆಂಟ್ ಪಡೆಯುವುದು ಇತ್ಯಾದಿಗಳನ್ನು ಬ್ಯಾಂಕ್‌ಗೆ ಭೇಟಿ ನೀಡದೆಯೇ ಮಾಡಬಹುದು.
3. ದೊಡ್ಡ ಅಂಗಡಿಗಳಲ್ಲಿ ಹಾಗೂ ಚಿಲ್ಲರೆ ಅಂಗಡಿಗಳಲ್ಲಿ ಖರೀದಿ ಮಾಡಲು, ಈ ಕೆಳಗಿನ ಪ್ರಕ್ರಿಯೆಯನ್ನು ಅನುಸರಿಸಿ:




### 4.1.4. ನಾನು ಈ ಕಾರ್ಡ್‌ಗಳನ್ನು ಏಕೆ ಬಳಸಬೇಕು?


- ನಿಮ್ಮ ಕಾರ್ಡನ್ನು ಎಲ್ಲಿಯೂ ಖರೀದಿ ಮಾಡಲು ಬಳಸಬಹುದು.
- ಅಂಗಡಿಗಳಲ್ಲಿ, ಎಟಿಎಂಗಳಲ್ಲಿ, ವ್ಯಾಲೆಟ್, ಮೈಕ್ರೋ ಎಟಿಎಂ, ಆನ್‌ಲೈನ್ ಶಾಪಿಂಗ್‌ನಲ್ಲಿ ಬಳಸಬಹುದು.
- ಡೆಬಿಟ್ ಹಾಗೂ ಕ್ರೆಡಿಟ್ ಕಾರ್ಡ್‌ಗಳನ್ನು ಎಟಿಎಂನಿಂದ ನಗದು ಪಡೆಯಲು ಬಳಸಬಹುದು, ಸರಕು ಹಾಗೂ ಸೇವೆಗಳನ್ನು ಪಾಯಿಂಟ್ ಆಫ್ ಸೇಲ್‌ನಲ್ಲಿ (ಪಿಒಎಸ್) ಪಡೆಯಬಹುದು ಹಾಗೂ ಆನ್‌ಲೈನ್ ಖರೀದಿ ಮಾಡಬಹುದು.
- ಯಾವುದೇ ರೀತಿಯ ಯುಟಿಲಿಟಿ ಬಿಲ್‌ಗಳನ್ನು ಪಾವತಿ ಮಾಡಲು ಬಳಸಬಹುದು.
- ಗ್ರಾಹಕರು ಟಿಕೆಟ್‌ಗಳನ್ನು (ವಿಮಾನ/ರೈಲು/ಬಸ್), ಹೊಟೆಲ್‌ಗಳನ್ನು ಬುಕ್ ಮಾಡಲು ಬಳಸಬಹುದು ಹಾಗೂ ರೆಸ್ಟಾರಂಟ್‌ಗಳಲ್ಲಿ ಪಾವತಿ ಮಾಡಲು ಬಳಸಬಹುದು.
- ನಿಮ್ಮ ಕಾರ್ಡ್‌ಅನ್ನು ಯಾವುದೇ ಸೇವೆಯನ್ನು, ಕಾರ್ಡ್ ರೀಡರ್/ ಪಿಒಎಸ್ ಯಂತ್ರ ಇರುವ ಯಾವುದೇ ಸ್ಥಳದಲ್ಲಿ ಬಳಸಬಹುದು.

### 4.1.5. ಕಾರ್ಡ್ ಪಡೆಯುವುದು ಹೇಗೆ?

ಗ್ರಾಹಕರು ಡೆಬಿಟ್/ರುಪೇ/ಕ್ರೆಡಿಟ್ ಕಾರ್ಡ್‌ಗಳಿಗೆ ಎಲ್ಲಾ ಸಾರ್ವಜನಿಕ ಮತ್ತು ಖಾಸಗಿ ವಲಯದ ಬ್ಯಾಂಕ್‌ಗಳಲ್ಲಿ ಅರ್ಜಿ ಹಾಕಬಹುದು.

- ನಾಗರಿಕರು ತಮ್ಮ ಬ್ಯಾಂಕ್ ಶಾಖೆಯಲ್ಲಿ ಅರ್ಜಿ ಸಲ್ಲಿಸುವ ಮೂಲಕ ಡೇಬಿಟ್ ಕಾರ್ಡ್ ಪಡೆಯಬಹುದು.
- ನಾಗರಿಕರು ಅವರ ಡೆಬಿಟ್ ಕಾರ್ಡ್‌ಗಳನ್ನು ರುಪೇ ಕಾರ್ಡ್‌ನೊಂದಿಗೆ ಕೂಡಾ ಬದಲಾಯಿಸಿಕೊಳ್ಳಬಹುದು.
- ಬ್ಯಾಂಕ್ ಖಾತೆ ಹೊಂದಿಲ್ಲದ ನಾಗರಿಕರು ಕಾರ್ಡ್ ಪಡೆಯಲು ಮೊದಲು ಖಾತೆ ತೆರೆಯಬೇಕು.
- ಸರ್ಕಾರಿ ಆದೇಶದಂತೆ, ಎಲ್ಲಾ ಜನ್ ಧನ್ ಖಾತೆದಾರರು ರುಪೇ ಕಾರ್ಡ್‌ಗಳನ್ನು ಪಡೆಯುತ್ತಾರೆ.

### 4.2. ಯುಎಸ್‌ಎಸ್‌ಡಿ (ಅನ್‌ಸ್ಟ್ರಕ್ಚರ್ಡ್ ಸಪ್ಲಿಮೆಂಟರಿ ಸರ್ವೀಸ್ ಡೇಟಾ)




### 4.2.1. ಯುಎಸ್‌ಎಸ್‌ಡಿ ಎಂದರೇನು?

ಯುಎಸ್‌ಎಸ್‌ಡಿ ಎಂದರೆ ಅನ್‌ಸ್ಟ್ರಕ್ಚರ್ಡ್ ಸಪ್ಲಿಮೆಂಟರಿ ಸರ್ವೀಸ್ ಡೇಟಾ (ರಚಿತವಲ್ಲದ ಪೂರಕ ಸೇವೆ ಡೇಟಾ) ಎಂದು. ಇದು ದೇಶದಲ್ಲಿ ಪ್ರತಿಯೊಬ್ಬ ಶ್ರೀಸಾಮಾನ್ಯನೂ ಬ್ಯಾಂಕಿಂಗ್ ಸೇವೆಗಳನ್ನು ಪಡೆಯುವಂತಾಗಲಿ ಎನ್ನುವ ಗುರಿಯನ್ನು ಹೊಂದಿರುವ ಒಂದು ಸೇವೆಯಾಗಿದೆ. ಈ ಸೇವೆ ಪ್ರತೀ ಗ್ರಾಹಕನೂ, ಯಾವುದೇ ದೂರಸಂಪರ್ಕ ಸೇವಾದಾರರ ಯಾವುದೇ ಪ್ರದೇಶ ಅಥವಾ ಮೊಬೈಲ್ ಉಪಕರಣ ಹೊಂದಿದ್ದರೂ, ಒಂದೇ ಸಂಖ್ಯೆಯಿಂದ ಬ್ಯಾಂಕಿಂಗ್ ಸೇವೆಯನ್ನು ಪಡೆಯಲು ಅನುವುಮಾಡಿಕೊಡುತ್ತದೆ. ಅನುಮತಿಸುತ್ತದೆ. ಇದನ್ನು ರಾಷ್ಟ್ರೀಯ ಸಂಘಟಿತ ಯುಎಸ್‌ಎಸ್‌ಡಿ ವೇದಿಕೆ (ಎನ್‌ಯುಯುಪಿ) ಮೂಲಕ ಒಂದು ಸಣ್ಣ ಕೋಡ್ * 99# ನಿಂದ ನೀಡಲಾಗುತ್ತದ್ದೈದನ್ನು ಪ್ರತೀ ಗ್ರಾಹಕರಿಗೆ ದಿನಕ್ಕೆ ರೂ.5000ದವರೆಗೆ ಪಾವತಿಗಳನ್ನು ಮಾಡಲು ಬಳಸಬಹುದು.

### 4.2.2. ನಿಮಗೆ ಏನು ಬೇಕು?

- ಬ್ಯಾಂಕೊಂದರಲ್ಲಿ ಖಾತೆ
- ಜಿಎಸ್‌ಎಂ ನೆಟ್‌ವರ್ಕ್ ಹೊಂದಿದ ಯಾವುದೇ ಮೊಬೈಲ್ ಫೋನ್

- ಗ್ರಾಹಕರ ಬ್ಯಾಂಕ್ ಖಾತೆಯಲ್ಲಿ ಅವರ ಮೊಬೈಲ್ ಸಂಖ್ಯೆ ದಾಖಲಾಗಿರಬೇಕು/

### 4.2.3. ನಾನದನ್ನು ಹೇಗೆ ಬಳಸಬಹುದು ?

1. ನಿಮ್ಮ ಬ್ಯಾಂಕ್ ಶಾಖೆಗೆ ಭೇಟಿ ನೀಡಿ ಹಾಗೂ ನಿಮ್ಮ ಮೊಬೈಲ್ ಸಂಖ್ಯೆಯನ್ನು ನಿಮ್ಮ ಬ್ಯಾಂಕ್ ಖಾತೆಯೊಂದಿಗೆ ಲಿಂಕ್ ಮಾಡಿ (ಇದನ್ನು ಎಟಿಎಂ ಮೂಲಕ ಅಥವಾ ಆನ್‌ಲೈನ್ ಮೂಲಕ ಮಾಡಬಹುದು)
2. ನೀವು ಮೊಬೈಲ್ ಮನಿ ಐಡೆಂಟಿಫೈಯರ್ (ಎಂಎಂಐಡಿ) ಹಾಗೂ ಮೊಬೈಲ್ ಪಿನ್ (ಎಂಪಿನ್) ಪಡೆಯುತ್ತೀರಿ.
3. ಎಂಪಿನ್ ಅನ್ನು ನೆನಪಿಟ್ಟುಕೊಳ್ಳಿ.

### 4.2.4. ಯುಎಸ್‌ಎಸ್‌ಡಿಯ ಲಾಭಗಳೇನು?




### 4.2.5. ಯುಎಸ್‌ಎಸ್‌ಡಿ ಬಳಸುವ ಕ್ರಮ

ಇದು ನಿಮ್ಮ ಫೋನ್‌ನಿಂದ ಪ್ರೀಪೇಡ್ ಬ್ಯಾಲನ್ಸ್ ಪರೀಕ್ಷಿಸುವುದರಷ್ಟೇ ಸುಲಭ! ಸಾಮಾನ್ಯ ಮೊಬೈಲ್ ಫೋನ್‌ನಿಂದ ಕೂಡಾ ಇದರಲ್ಲಿ ವ್ಯವಹರಿಸುವುದು ಸಾಧ್ಯವಿದೆ.

- ನಿಮ್ಮ ಮೊಬೈಲ್ ಸಂಖ್ಯೆಯನ್ನು ನಿಮ್ಮ ಬ್ಯಾಂಕ್ ಖಾತೆಯೊಂದಿಗೆ ಲಿಂಕ್ ಮಾಡಿ
- ನಿಮ್ಮ ಫೋನ್‌ನಿಂದ *99# ಡಯಲ್ ಮಾಡಿ
- ನಿಮ್ಮ ಬ್ಯಾಂಕ್‌ನ ಮೊದಲ 3 ಅಕ್ಷರಗಳು ಅಥವಾ ಐಎಫ್‌ಎಸ್‌ಸಿಯ ಮೊದಲ 4 ಅಕ್ಷರಗಳನ್ನು ತುಂಬಿ
- “ಫಂಡ್–ಟ್ರಾನ್ಸ್ಫರ್–ಎಂಎಂಐಡಿ” ಆಯ್ಕೆಯನ್ನು ಆಯ್ದುಕೊಳ್ಳಿ
- ಪಾವತಿಸಬೇಕೆಂದಿರುವವರ ಮೊಬೈಲ್ ಸಂಖ್ಯೆ ಹಾಗೂ ಎಂಎಂಐಡಿ ನಮೂದಿಸಿ
- ಮೊತ್ತವನ್ನು ಹಾಗೂ ನಿಮ್ಮ ಎಂಪಿನ್ ನಮೂದಿಸಿ, ಒಂದು ಖಾಲಿ ಜಾಗವನ್ನು ಬಿಟ್ಟು ನಿಮ್ಮ ಬ್ಯಾಂಕ್ ಖಾತೆಯ ಕೊನೆಯ 4 ಅಂಕೆಗಳನ್ನು ನಮೂದಿಸಿ

ಈ ಮೇಲೆ ಹೇಳಿದ ಕ್ರಮಗಳನ್ನು ಪಾಲಿಸುವುದರಿಂದ ನೀವು ನಿಮ್ಮ ಹಣವನ್ನು ವರ್ಗಾಯಿಸಬಹುದು.

### 4.2.6. ಲಭ್ಯವಿರುವ ಸೇವೆಗಳು:

#### *4.2.6.1. ಆರ್ಥಿಕವಲ್ಲದ ಸೇವೆಗಳು:*


- ✓ **ಬ್ಯಾಲನ್ಸ್ ವಿಚಾರಣೆ –** ಬಳಕೆದಾರನು ಮೊಬೈಲ್ ಸಂಖ್ಯೆಗೆ ಲಿಂಕ್ ಆದ ಬ್ಯಾಂಕ್ ಖಾತೆಯ ಬ್ಯಾಲನ್ಸ್ ಪರೀಕ್ಷಿಸಬಹುದು.
- ✓ **ಮಿನಿ ಸ್ಟೇಟ್‌ಮೆಂಟ್ –** ಬಳಕೆದಾರನು ಬಳಕೆದಾರನು ಮೊಬೈಲ್ ಸಂಖ್ಯೆಗೆ ಲಿಂಕ್ ಆದ ಬ್ಯಾಂಕ್ ಖಾತೆಯ ಮಿನಿ ಸ್ಟೇಟ್‌ಮೆಂಟ್ ಪಡೆಯಬಹುದು.
- ✓ **ಎಂಎಂಐಡಿ ತಿಳಿಯುವುದು *(ಮೊಬೈಲ್ ಮನಿ ಐಡೆಂಟಿಫಯರ್) –** ಬಳಕೆದಾರನು ಮೊಬೈಲ್ ಬ್ಯಾಂಕಿಂಗ್ ದಾಖಲಾತಿಯ ಸಂದರ್ಭ ಬ್ಯಾಂಕ್ ಕೊಟ್ಟಂತಹ ಎಂಎಂಐಡಿ ತಿಳಿಯಬಹುದು.
- ✓ **ಎಂ–ಪಿನ್ ಸೃಷ್ಟಿಸುವುದು/ಬದಲಿಸುವುದು –** ಬಳಕೆದಾರನು ಎಂ–ಪಿನ್ (ಮೊಬೈಲ್ ಪಿನ್)ಅನ್ನು ಸೃಷ್ಟಿಸಬಹುದು/ಬದಲಿಸಬಹುದು, ಇದು ಪಾಸ್‌ವರ್ಡ್‌ನಂತಿದ್ದು ಆರ್ಥಿಕ ವ್ಯವಹಾರಗಳನ್ನು ಅಧಿಕೃತಗೊಳಿಸುತ್ತದೆ.

#### *4.2.6.2. ಆರ್ಥಿಕ ಸೇವೆಗಳು:*

- ➢ **ಮೊಬೈಲ್ ಸಂಖ್ಯೆ ಹಾಗೂ ಎಂಎಂಐಡಿ ಬಳಸಿ ಹಣ ವರ್ಗಾವಣೆ–** ಬಳಕೆದಾರರು ಲಾಭಾನ್ವಿತರ ಮೊಬೈಲ್ ಸಂಖ್ಯೆ ಹಾಗೂ ಎಂಎಂಐಡಿ ಬಳಸಿ ಹಣ ವರ್ಗಾವಣೆ ಮಾಡಬಹುದು.
- ➢ **ಖಾತೆ ಸಂಖ್ಯೆ ಹಾಗೂ ಐಎಫ್ಎಸ್‌ಸಿ ಬಳಸಿ ಹಣ ವರ್ಗಾವಣೆ–** ಬಳಕೆದಾರರು ಲಾಭಾನ್ವಿತರ ಖಾತೆ ಸಂಖ್ಯೆ ಹಾಗೂ ಐಎಫ್ಎಸ್‌ಸಿ ನಮೂದಿಸಿ ಹಣ ವರ್ಗಾವಣೆ ಮಾಡಬಹುದು.

ಹೆಚ್ಚಿನ ಮಾಹಿತಿಗಾಗಿ ನೀವು ಸಂಬಂಧಿತ ಬ್ಯಾಂಕ್‌ನ ವೆಬ್‌ಸೈಟ್‌ಗೆ ಭೇಟಿ ನೀಡಬಹುದು.

### 4.3. ಎಇಪಿಎಸ್ (ಆಧಾರ್ ಆಧಾರಿತ ಪಾವತಿ ವ್ಯವಸ್ಥೆ)



### 4.3.1. ಎಇಪಿಎಸ್ ಎಂದರೇನು?

ಎಇಪಿಎಸ್ ಎಂದರೆ ಆಧಾರ್ ಆಧಾರಿತ ಪಾವತಿ ವ್ಯವಸ್ಥೆ ಎಂದು. ಇದು ಬ್ಯಾಂಕ್ ಗ್ರಾಹಕರ ಆಧಾರ್‌ಅನ್ನು ಅವನ/ಅವಳ ಗುರುತಿನ ರೂಪದಲ್ಲಿ ಅವನ/ಅವಳ ಆಧಾರ್ ಆಧಾರಿತ ಬ್ಯಾಂಕ್ ಖಾತೆಯನ್ನು ಪ್ರವೇಶಿಸಿ ಮೂಲ ಬ್ಯಾಂಕಿಂಗ್ ವ್ಯವಹಾರಗಳನ್ನು ಕೈಗೊಳ್ಳುವಂತೆ ಸಶಕ್ತಗೊಳಿಸುವ ಒಂದು ಪಾವತಿ ಸೇವೆಯಾಗಿದೆ. ಇದು ಪಿಓಎಸ್(ಮೈಕ್ರೋ ಎಟಿಎಂ)ನಲ್ಲಿ ಬ್ಯಾಂಕ್‌ನಿಂದ–ಬ್ಯಾಂಕ್ ವ್ಯವಹಾರಗಳನ್ನು ಬ್ಯಾಂಕಿಂಗ್ ಪ್ರತಿನಿಧಿಯ (ಬಿಸಿ)/ವಿಎಲ್‌ಇ ಸಹಾಯದಿಂದ ಅನುವುಮಾಡಿಕೊಡುತ್ತದೆ. ಬಳಕೆದಾರರು ಅವನ/ಅವಳ ಆಧಾರ್ ಸಂಖ್ಯೆಯನ್ನು ಬಿಸಿ/ವಿಎಲ್‌ಇ ಸಹಾಯದಿಂದ ಬ್ಯಾಂಕ್‌ನಲ್ಲಿ ನೋಂದಾಯಿಸಬೇಕು. ಬಳಕೆದಾರರು ಎಇಪಿಎಸ್ ಪಾಯಿಂಟ್‌ನೊಂದಿಗೆ ಯಾವುದೇ ಪಿನ್ ಅಥವಾ ಪಾಸ್‌ವರ್ಡ್ ಇಲ್ಲದೇ ಎಷ್ಟು ಬೇಕಾದರೂ ವ್ಯವಹಾರಗಳನ್ನು ನಡೆಸಬಹುದು.

### 4.3.2. ಎಇಪಿಎಸ್ ಚಾಲನೆ ಮಾಡಲು ನಾನು ಏನು ಮಾಡಬೇಕು?

ಗ್ರಾಹಕರು ಎಇಪಿಎಸ್ ವ್ಯವಹಾರ ಮಾಡಲು ಬೇಕಿರುವ ಮಾಹಿತಿಗಳೆಂದರೆ:–

- ಐಐಎನ್ (ಗ್ರಾಹಕರಿಗೆ ಸಂಬಂಧಿಸಿದ ಬ್ಯಾಂಕ್‌ನ ಗುರುತಿಸುವಿಕೆ)
- ಆಧಾರ್ ಸಂಖ್ಯೆ
- ದಾಖಲಾತಿಯ ಸಂದರ್ಭ ಪಡೆದ ಬೆರಳಚ್ಚು

### 4.3.3. ನಾನು ಇದನ್ನು ಏಕೆ ಬಳಸಬೇಕು?

ನೀವು ಎಇಪಿಎಸ್ ನಿಂದ ಈ ಕೆಳಗಿನ ವ್ಯವಹಾರಗಳನ್ನು ಮಾಡಬಹುದು:–

- ಬ್ಯಾಲನ್ಸ್ ಪರೀಕ್ಷೆ
- ನಗದು ಪಡೆಯುವಿಕೆ
- ನಗದು ಜಮೆ
- ಆಧಾರ್ ನಿಂದ ಆಧಾರ್‌ಗೆ ಹಣ ವರ್ಗಾವಣೆ
- ನ್ಯಾಯಬೆಲೆ ಅಂಗಡಿಗಳಲ್ಲಿ ಎಇಪಿಎಸ್‌ನಿಂದ ಖರೀದಿ.


### 4.3.4. ಎಇಪಿಎಸ್ ವ್ಯವಹಾರಕ್ಕೆ ಈ ಕೆಳಗಿನ ಕ್ರಮಗಳನ್ನು ಅನುಸರಿಸಿ:



### 4.3.5. ನಾನಿದನ್ನು ಏಕೆ ಬಳಸಬೇಕು?

- ❖ ಆಧಾರ್ ಸಂಖ್ಯೆಯನ್ನು ಹಾಗೂ ಬೆರಳಚ್ಚು ಬಳಸಿಕೊಂಡು ಸೌಲಭ್ಯಗಳನ್ನು ಪಡೆಯಲು ಬಳಸಲು ಸುಲಭ, ಸುರಕ್ಷಿತ ಮತ್ತು ಭದ್ರತೆಯ ಪಾವತಿ ವೇದಿಕೆ.
- ❖ ವ್ಯಕ್ತಿಯ ಜನಸಂಖ್ಯಾ ಮತ್ತು ಬಯೋಮೆಟ್ರಿಕ್/ಐರಿಸ್ ಮಾಹಿತಿಯನ್ನು ಆಧರಿಸಿ, ಇದು ಯಾವುದೇ ವಂಚನೆ ಮತ್ತು ಮೋಸದ ಚಟುವಟಿಕೆಗಳಾಗುವ ಬೆದರಿಕೆಯನ್ನು ನಿವಾರಿಸುತ್ತದೆ.
- ❖ ಸರ್ಕಾರಿ ಯೋಜನೆಗಳಾದ ಎನ್‌ರೇಗಾ, ಸಾಮಾಜಿಕ ಭದ್ರತೆ ಪಿಂಚಣಿ, ಅಂಗವೈಕಲ್ಯ ಹಾಗೂ ವೃದ್ಧಾಪ್ಯ ವೇತನ ಇತ್ಯಾದಿ ಕೇಂದ್ರ ಹಾಗೂ ರಾಜ್ಯ ಸರ್ಕಾರಿ ಸಂಸ್ಥೆಗಳ ಪಾವತಿಗಳನ್ನು ಆಧಾರ್ ದೃಢೀಕರಣದಿಂದ ಪಡೆದುಕೊಳ್ಳಬಹುದು.
- ❖ ಅಂತರ್–ಬ್ಯಾಂಕುಗಳ ಪರಸ್ಪರ ಕಾರ್ಯಚಟುವಟಿಕೆಗಳನ್ನು ಭದ್ರ, ಸುರಕ್ಷಿತ ಹಾಗೂ ಸುಗಮಗೊಳಿಸುತ್ತದೆ
- ❖ ಬ್ಯಾಂಕುಗಳು ತಮ್ಮ ಹಣಕಾಸು ಸೇವೆಗಳನ್ನು ತನ್ನ ಶಾಖೆಯ ಜಾಲದ ಹೊರಗಿರುವ, ತಲುಪಲಾರದ ಗ್ರಾಹಕರಿಗೂ ವಿಸ್ತರಿಸಬಹುದು. ಉದಾಹರಣೆಗೆ ಬಿಸಿಯ ಹೆಚ್ಚಿನ ಲಾಭಾನ್ವಿತರು ದೂರದ ಅಥವಾ ಬ್ಯಾಂಕುಗಳಿಲ್ಲದ ಪ್ರದೇಶಗಳಲ್ಲಿ ಇರುತ್ತಾರೆ.
- ❖ ಯಾವುದೇ ವ್ಯವಹಾರ ದರಗಳನ್ನು ಸದ್ಯಕ್ಕೆ ವಿಧಿಸಲಾಗುತ್ತಿಲ್ಲ.
- ❖ ಬ್ಯಾಂಕ್ ಖಾತೆ ಸಂಖ್ಯೆ ನೆನಪಿಡುವ ಅಗತ್ಯವಿಲ್ಲ.
- ❖ ಬಯೋಮೆಟ್ರಿಕ್ ಸಾಧನಗಳನ್ನು ಹೊಂದಿರುವ ಗ್ರಾಹಕರು ವ್ಯವಹಾರಗಳನ್ನು ಕಂಪ್ಯೂಟರ್, ಆಂಡ್ರಾಯಿಡ್ ಫೋನ್ / ಟ್ಯಾಬ್ಲೆಟ್‌ಗಳನ್ನು ಬಳಸಿ ಮನೆಯಿಂದಲೇ ಮಾಡಬಹುದು. ಅಂತರ್ಗತ ಬಯೋಮೆಟ್ರಿಕ್ ಸಾಧನಗಳನ್ನು ಹೊಂದಿರುವ ಟ್ಯಾಬ್ಲೆಟ್‌ಗಳನ್ನು ಕೂಡಾ ವ್ಯವಹಾರಗಳಿಗೆ ಬಳಸಬಹುದು.

## 4.4. ಯುಪಿಐ (ಯುನಿಫೈಡ್ ಪೇಮೆಂಟ್ಸ್ ಇಂಟರ್‌ಫೇಸ್)




### 4.4.1. ಯುಪಿಐ ಎಂದರೇನು?

ಯುಪಿಐ ಎಂದರೆ ಯುನಿಫೈಡ್ ಪೇಮೆಂಟ್ಸ್ ಇಂಟರ್‌ಫೇಸ್. ಇದನ್ನು ಸ್ಮಾರ್ಟ್‌ಫೋನ್ ಮೂಲಕ ಶೀಘ್ರ, ಎಲೆಕ್ಟ್ರಾನಿಕ್ ಪಾವತಿಗಳನ್ನು ಮಾಡಲು ಬಳಸಬಹುದು. ಇದು ಶೀಘ್ರ ಪಾವತಿ ಸೇವೆಯ (ಐಎಂಪಿಎಸ್) ಅಂದು ಆಧುನಿಕ ರೂಪವಾಗಿದ್ದು ಬ್ಯಾಂಕ್ ಖಾತೆಗಳ ನಡುವೆ ಹಣ ವರ್ಗಾವಣೆಗೆ ಬಳಸಲಾಗುತ್ತದೆ. ಐಎಂಪಿಎಸ್‌ಗಳ ಹಾಗೆ ಯುಪಿಐ ಕೂಡಾ ದಿನದ 24

ಗಂಟೆಯೂ ಹಣ ವರ್ಗಾವಣೆ ಸೇವೆಯನ್ನು ಸುಗಮವಾಗಿ ನಡೆಸುತ್ತದೆ.

- ಇದು ಡೆಬಿಟ್ ಕಾರ್ಡ್‌ನಂತೆ ಬಳಕೆದಾರನ ಗುರುತನ್ನು ಕಾರ್ಡ್‌ನ ಬದಲಾಗಿ ಫೋನನ್ನು ಉಪಕರಣವನ್ನಾಗಿ ಬಳಸುವ ಮೂಲಕ ದೃಢೀಕರಿಸುತ್ತದೆ.
- ಇದು ದಿನದ 24 ಗಂಟೆಯೂ, 365 ದಿನವೂ ಕಾರ್ಯಾಚರಿಸುತ್ತದೆ.

### 4.4.2. ನಿಮಗೆ ಏನು ಬೇಕು?

- ಯುಪಿಐ ಸೌಲಭ್ಯ (ಆಪ್) ಇರುವ ಸ್ಮಾರ್ಟ್‌ಫೋನ್
- ಬ್ಯಾಂಕ್ ಖಾತೆ

### 4.4.3. ಇದು ಹೇಗೆ ಕೆಲಸ ಮಾಡುತ್ತದೆ?

ಯುಪಿಐ ಮೂಲಕ ಆನ್‌ಲೈನ್ ವ್ಯವಹಾರಗಳನ್ನು ನಡೆಸಲು ಮೂರು ಸರಳ ಕ್ರಮಗಳಿವೆ.

**ನೋಂದಣಿ**
- ನಿಮ್ಮ ಬ್ಯಾಂಕ್‌ನ ಯುಪಿಐ ಆಪ್ ಡೌನ್‌ಲೋಡ್ ಮಾಡಿ
- ನಿಮ್ಮ ಬ್ಯಾಂಕ್ ವಿವರಗಳನ್ನು ನೋಂದಾಯಿಸಿ ಹಾಗೂ ನಿಮ್ಮ ಹೆಸರು ಹಾಗೂ ಫೋನ್ ಸಂಖ್ಯೆಯೊಂದಿಗೆ ವರ್ಚುಯಲ್ ಐಡಿ ಒಂದನ್ನು ಸೃಷ್ಟಿಸಿ
- ಒಂದು ಬಾರಿಯ ಪ್ರಕ್ರಿಯೆ

**ಆನ್‌ಲೈನ್ ಖರೀದಿ**
- ನೀವು ಖರೀದಿಸಬೇಕೆಂದಿರುವ ವಸ್ತುವನ್ನು ಕಾರ್ಟ್‌ಗೆ ಸೇರಿಸಿ
- ಪಾವತಿ ಆಯ್ಕೆಗೆ ಹೋಗಿ ಹಾಗೂ ಯುಪಿಐ ಮೂಲಕ ಪಾವತಿ ಆಯ್ಕೆ ಮಾಡಿ
- ನಿಮ್ಮ ವರ್ಚುಯಲ್ ಐಡಿಯನ್ನು ಕೇವಲ ವ್ಯಾಪಾರಿಗೆ ಮಾತ್ರ ನೀಡಿ

**ಮೊಬೈಲ್ ದೃಢೀಕರಣ**
- ನೀವು ನಿಮ್ಮ ಫೋನ್‌ನ ಯುಪಿಐ ಆಪ್‌ನಲ್ಲಿ ಪಾಪ್-ಅಪ್ ವಿಂಡೊ ಒಂದನ್ನು ಕಾಣುತ್ತೀರಿ, ನಿಮ್ಮ ಆನ್‌ಲೈನ್ ಖರೀದಿ ಅನುಮೋದಿಸುವಂತೆ
- ಸೆಕ್ಯುರ್ ಪಿನ್ ನಮೂದಿಸಿ
- ಯಶಸ್ವಿ ಪಾವತಿಯ ದೃಢೀಕರಣವನ್ನು ನಿಮ್ಮ ಮೊಬೈಲ್‌ಗೆ ಕಳಿಸಲಾಗುವುದು

### 4.4.4. ಇದರ ವೈಶಿಷ್ಟ್ಯ ಹಾಗೂ ಲಾಭಗಳೇನು?

- ಯುಪಿಐ, ಬಳಕೆದಾರನ ಹೆಸರು, ಬ್ಯಾಂಕ್ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ಕೋಡ್ ಅಥವಾ ಬ್ಯಾಂಕ್ ಶಾಖೆಯ ವಿವರಗಳ ನಮೂದಿಸುವಿಕೆಯನ್ನು ಕೊನೆಗೊಳಿಸುತ್ತದೆ.
- ಯುಪಿಐ ಡೆಬಿಟ್ ಕಾರ್ಡ್‌ಗಳಂತಹ ಭೌತಿಕ ಸಾಧನಗಳ ಬಳಕೆಯನ್ನು ಕೊನೆಗೊಳಿಸುತ್ತದೆ.

- ಅಸುರಕ್ಷಿತ ಚೌಕಟ್ಟುಗಳ ಕಾರಣ ವಂಚನೆಗಳು ನಡೆಯಬಹುದಾದ, ಬಹು ಹಂತದ ಪ್ರಕ್ರಿಯೆಗಳನ್ನೊಳಗೊಂಡ ಆನ್‌ಲೈನ್ ಬ್ಯಾಂಕಿಂಗ್‌ನ ಅಗತ್ಯವಿಲ್ಲ.
- ಸರಳ ಅಪ್ಲಿಕೇಶನ್ ಮತ್ತು ಯಾರಾದರೂ ಬಳಸಬಹುದು.
- ಶೀಘ್ರ ಮತ್ತು ಸುರಕ್ಷಿತ ದೃಢೀಕರಣ ಮತ್ತು ಎಲ್ಲಿಯಾದರೂ ಪ್ರಾರಂಭಿಸಬಹುದು.
- ಸಂಪೂರ್ಣ ನಗದುರಹಿತ ಡಿಜಿಟಲ್ ಸಮಾಜಕ್ಕೆ ದಾರಿ ಮಾಡಿಕೊಡುತ್ತದೆ.
- ಇನ್‌ವಾಯ್ಸ್‌ನ ಹಾಗೆ ಹಣಕಾಸಿನ ವಿನಂತಿಗಾಗಿ ಕೂಡಾ ಬಳಸಬಹುದು.
- ಗ್ರಾಹಕರು ಯುಟಿಲಿಟಿ ಬಿಲ್ ಮತ್ತು ಶಾಲಾ ಶುಲ್ಕದ ಆನ್ಲೈನ್ ಪಾವತಿ ಮಾಡಲು ಕೂಡಾ ಯುಪಿಐ ಬಳಸಬಹುದು.


## 4.5. ಇ–ವ್ಯಾಲೆಟ್




### 4.5.1. ಇ–ವ್ಯಾಲೆಟ್ ಎಂದರೇನು?

ಇ–ವಾಲೆಟ್ ಅಂದರೆ ಎಲೆಕ್ಟ್ರಾನಿಕ್ ವ್ಯಾಲೆಟ್. ಇದು ಒಂದು ರೀತಿಯ ವಿದ್ಯುನ್ಮಾನ ಕಾರ್ಡ್ ಆಗಿದ್ದು, ಕಂಪ್ಯೂಟರ್ ಅಥವಾ ಸ್ಮಾರ್ಟ್‌ಫೋನ್ ಮೂಲಕ ಆನ್‌ಲೈನ್ ವಹಿವಾಟುಗಳಿಗೆ ಬಳಸಲಾಗುತ್ತದೆ. ಇ–ವಾಲೆಟ್‌ನಿಂದ ಪಾವತಿಗಳನ್ನು ಮಾಡಲು ಅದನ್ನು ವ್ಯಕ್ತಿಯ ಬ್ಯಾಂಕ್ ಖಾತೆಯೊಂದಿಗೆ ಲಿಂಕ್ ಮಾಡಬೇಕು. ಇ–ವಾಲೆಟ್ ಮುಖ್ಯ ಉದ್ದೇಶವೆಂದರೆ ಕಾಗದರಹಿತ ಹಣದ ವ್ಯವಹಾರವನ್ನು ಸುಗಮಗೊಳಿಸುವುದು.

### 4.5.2. ಇ-ವ್ಯಾಲೆಟ್‌ನ ವೈಶಿಷ್ಟ್ಯಗಳು




### 4.5.3. ಇದು ಹೇಗೆ ಕೆಲಸ ಮಾಡುತ್ತದೆ?

ಇ-ವಾಲೆಟ್ ಮುಖ್ಯವಾಗಿ ಎರಡು ಘಟಕಗಳನ್ನು ಹೊಂದಿದೆ ತಂತ್ರಾಂಶ ಮತ್ತು ಮಾಹಿತಿ.

*ತಂತ್ರಾಂಶ ಘಟಕವು* ವೈಯಕ್ತಿಕ ಮಾಹಿತಿಯನ್ನು ಸಂಗ್ರಹಿಸುತ್ತದೆ ಮತ್ತು ಭದ್ರತೆ ಮತ್ತು ದತ್ತಾಂಶದ ಗೂಢಲಿಪೀಕರಣವನ್ನು ಒದಗಿಸುತ್ತದೆ ಹಾಗೆಯೇ *ಮಾಹಿತಿ ಘಟಕವು* ಬಳಕೆದಾರರು ಒದಗಿಸುವ ವಿವರಗಳಾದ ಅವರ ಹೆಸರು, ವಿಳಾಸ, ಪಾವತಿ ವಿಧಾನ, ಪಾವತಿಸಬೇಕಾದ ಮೊತ್ತ, ಕ್ರೆಡಿಟ್ ಅಥವಾ ಡೆಬಿಟ್ ಕಾರ್ಡ್ ವಿವರಗಳು ಇತ್ಯಾದಿಗಳ ಡೇಟಾಬೇಸ್ ಹೊಂದಿದೆ.

### 4.5.4. ನಾನು ಇ-ವ್ಯಾಲೆಟ್ ಹೇಗೆ ಬಳಸಬಹುದು?

#### *4.5.4.1. ಗ್ರಾಹಕರಿಗಾಗಿ:*

- ನಿಮ್ಮ ಮೊಬೈಲ್‌ನಲ್ಲಿ ಆಪ್ ಡೌನ್ಲೋಡ್ ಮಾಡಿ.
- ಸಂಬಂಧಿತ ಮಾಹಿತಿ ತುಂಬುವ ಮೂಲಕ ಸೈನ್ ಅಪ್ ಮಾಡಿ. ಬಳಕೆದಾರರು ಪಾಸ್‌ವರ್ಡ್ ಸ್ವೀಕರಿಸುತ್ತಾರೆ.
- ಡೆಬಿಟ್ / ಕ್ರೆಡಿಟ್ ಕಾರ್ಡ್ ಅಥವಾ ನೆಟ್-ಬ್ಯಾಂಕಿಂಗ್ ಬಳಸಿ ಹಣ ಲೋಡ್ ಮಾಡಿ.
- ಶಾಪಿಂಗ್‌ನ ನಂತರ, ಇ-ವಾಲೆಟ್ ಸ್ವಯಂಚಾಲಿತವಾಗಿ ಪಾವತಿ ನಮೂನೆಯಲ್ಲಿ ಬಳಕೆದಾರರ ಮಾಹಿತಿಯನ್ನು ತುಂಬುತ್ತದೆ.
- ಒಮ್ಮೆ ಪಾವತಿ ಆದ ನಂತರ, ಬಳಕೆದಾರರು ಇತರ ವೆಬ್‌ಸೈಟ್‌ಗಳಲ್ಲಿ ಯಾವುದೇ ಆರ್ಡರ್ ನಮೂನೆ ತುಂಬುವ ಅಗತ್ಯವಿಲ್ಲ, ಏಕೆಂದರೆ ಡೇಟಾಬೇಸ್‌ನಲ್ಲಿ ಸಂಗ್ರಹವಾಗಿರುವ ಮಾಹಿತಿಯು ತಾನಾಗಿಯೇ ಅಪ್ಡೇಟ್ ಆಗುತ್ತದೆ.

#### *4.5.4.2. ವ್ಯಾಪಾರಿಗಳಿಗೆ:*

- ವ್ಯಾಪಾರಿಯು ಅವನ/ಅವಳ ಮೊಬೈಲ್‌ನಲ್ಲಿ ಆಪ್ ಡೌನ್ಲೋಡ್ ಮಾಡಿಕೊಳ್ಳುತ್ತಾರೆ.
- ಸಂಬಂಧಿತ ಮಾಹಿತಿ ತುಂಬುವ ಮೂಲಕ ಸೈನ್ ಅಪ್ ಮಾಡಿ. ಬಳಕೆದಾರರು ಪಾಸ್‌ವರ್ಡ್ ಸ್ವೀಕರಿಸುತ್ತಾರೆ.
- ನಿಮ್ಮನ್ನು ನೀವು ವ್ಯಾಪಾರಿ ಎಂದು ಘೋಷಿಸಿಕೊಳ್ಳಿ.
- ಪಾವತಿಗಳನ್ನು ಸ್ವೀಕರಿಸಲು ಪ್ರಾರಂಭಿಸಿ.

### *4.5.4.3. ಇ–ವ್ಯಾಲೆಟ್ ಬಳಕೆ ಆರಂಭಿಸಲು ನಾನು ಏನು ಮಾಡಬೇಕು?*

1. ಬ್ಯಾಂಕ್ ಖಾತೆ
2. ಸ್ಮಾರ್ಟ್‌ಫೋನ್
3. 2ಜಿ/3ಜಿ/4ಜಿ ಸಂಪರ್ಕ
4. ಒಂದು ಉಚಿತ ವ್ಯಾಲೆಟ್ ಆಪ್


### *4.5.4.4. ಅಗತ್ಯವಾಗಿ ಪಾಲಿಸಬೇಕಾದ ಅಭ್ಯಾಸಗಳು*

- ✓ ನಿಮ್ಮ ಮೊಬೈಲ್ ಸಂಖ್ಯೆಯನ್ನು ಬ್ಯಾಂಕ್‌ನಲ್ಲಿ ದಾಖಲಿಸಿ, ಪ್ರತೀ ವ್ಯವಹಾರಕ್ಕೂ ಒಂದು ಎಸ್‌ಎಮ್‌ಎಸ್ ಬರುವ ಹಾಗೆ ಮಾಡಲು.
- ✓ ನಿಮ್ಮ ಪಿನ್ ಅನ್ನು ಯಾರೊಂದಿಗೂ ಹಂಚಿಕೊಳ್ಳಬೇಡಿ/ ಹೇಳಬೇಡಿ.
- ✓ ಕೇವಲ ವಿಶ್ವಾಸಾರ್ಹ ವ್ಯಾಪಾರಿಗಳೊಂದಿಗೆ ಮಾತ್ರ ವ್ಯವಹರಿಸಿ.
- ✓ ಎಟಿಎಂನಲ್ಲಿರುವಾಗ ಯಾರೂ ನಿಮ್ಮ ಹಿಂದಿನಿಂದ ನಿಮ್ಮ ವ್ಯವಹಾರ ನೋಡುತ್ತಿಲ್ಲವೆಂದು ಖಚಿತಪಡಿಸಿಕೊಳ್ಳಿ.

## 5. ಯೋಜನೆಯಲ್ಲಿ ವಿಎಲ್‌ಇಗಳು ಹಾಗೂ ಅವರ ಪಾತ್ರ:

ತರಬೇತಿ ಪಡೆದ ವಿಎಲ್‌ಇಗಳು ಈ ಕೆಳಗಿನ ಆಯ್ಕೆ ಮಾನದಂಡಗಳ ಪ್ರಕಾರ ಸಮುದಾಯವನ್ನು ಗುರುತಿಸಿ ಚಾಲನೆ ಮಾಡುತ್ತಾರೆ:

1. ಪಂಚಾಯತ್ ಪ್ರತಿನಿಧಿಗಳೊಡನೆ ಸಮಾಲೋಚನೆ ನಡೆಸಿ ಪ್ರತಿ ಮನೆಯ ವ್ಯಕ್ತಿಯಿಂದ ಆಯ್ಕೆ ಮಾಡಬೇಕು;
2. ಪ್ರತಿ ಸಿಎಸ್‌ಸಿ 40 ಮಂದಿ ಪಾಲ್ಗೊಳ್ಳುವವರನ್ನು ಒಳಗೊಳ್ಳುತ್ತದೆ, ಪ್ರತಿ ಮನೆಯಿಂದ ಒಬ್ಬರು ಅಂದರೆ ಪ್ರತಿ ಸಿಎಸ್‌ಸಿ, ಸಂಗ್ರಹಣಾ ಪ್ರದೇಶದಿಂದ 40 ಕುಟುಂಬಗಳನ್ನು ಒಳಗೊಳ್ಳುತ್ತದೆ.
3. ಪ್ರತೀ ಸಿಎಸ್‌ಸಿಯಿಂದ ಸರಾಸರಿ 40 ನಾಗರಿಕರ ಖಾತೆ ಸಕ್ರಿಯಗೊಳಿಸುವುದು.
4. ವಿಎಲ್‌ಇಗಳು ಪ್ರತಿ ಪಂಚಾಯಿತಿಯಿಂದ ಸರಾಸರಿ 10 ವ್ಯಾಪಾರಿಗಳನ್ನು ಒಳಪಡಿಸಬೇಕು ಹಾಗೂ ಅವರಿಗೆ ಡಿಜಿಟಲ್ ಪಾವತಿ ವೇದಿಕೆ ಬಳಸಲು ಹಾಗೂ ಖಾತೆಯನ್ನು ಸಕ್ರಿಯಗೊಳಿಸುವಲ್ಲಿ ಬೆಂಬಲಿಸಬೇಕು.
5. ಸರ್ಕಾರಿ ಕಾರ್ಯಕರ್ತರು ಮತ್ತು ಇತರರು ನಡೆಸುವ ಡಿಜಿಟಲ್ ಆರ್ಥಿಕ ವೇದಿಕೆಗಳ ಬಗ್ಗೆ ಜಿಲ್ಲಾ ಮತ್ತು ಬ್ಲಾಕ್ ಮಟ್ಟದಲ್ಲಿ ಜಾಗೃತಿ ಮೂಡಿಸುವುದು.
6. ವಿಎಲ್‌ಇಗಳು ತರಬೇತಿಯ ನಂತರ ನಾಗರಿಕರ ಸಾಕ್ಷಿ/ದಾಖಲೆಗಳನ್ನು ನಗದುರಹಿತ ಸೌಲಭ್ಯದ ಮೂಲಕ ಸಂಗ್ರಹಿಸುತ್ತಾರೆ.
7. ವಿಎಲ್‌ಇಗಳು ಈ ಯೋಜನೆಗೆ ಸಂಬಂಧಿಸಿದ ಎಲ್ಲಾ ಮಾಹಿತಿಯನ್ನು, ಸಿಎಸ್‌ಸಿ–ಎಸ್‌ಪಿವಿ ಅಭಿವೃದ್ಧಿಪಡಿಸಿದ ಮೇಲ್ವಿಚಾರಣೆ ಸಾಧನಕ್ಕೆ ಅಪ್‌ಲೋಡ್ ಮಾಡುತ್ತಾರೆ.




8. ವಿಎಲ್‌ಇಗಳು ಇತರ ವಿನೂತನ ಮಾರ್ಗಗಳನ್ನು ಬಳಸಿ ಡಿಜಿಟಲ್ ಆರ್ಥಿಕ ಜಾಗೃತಿ/ಲಭ್ಯತೆಯನ್ನು ಉತ್ತೇಜಿಸುತ್ತಾರೆ. ವಿಎಲ್‌ಇಗಳು ಕೆಳಗಿನ ಚಟುವಟಿಕೆಗಳನ್ನು ಮಾಡಬಹುದು:

- ಶಾಲೆಗಳು/ಕಾಲೇಜುಗಳಿಗೆ ಭೇಟಿ ನೀಡಿ ಮತ್ತು ಸಾಧನಗಳು/ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.
- ಎನ್‌ಎಸ್‌ಎಸ್ ಸ್ವಯಂಸೇವಕರನ್ನು ಬಳಸಿ ಜಾಗೃತಿ ಮೂಡಿಸಿ.
- ಸ್ವ-ಸಹಾಯ ಸಂಘಗಳನ್ನು ಹಾಗೂ ಇತರ ಸ್ವಯಂಸೇವಾ ಸಂಘಟನೆಗಳನ್ನು ಸಕ್ರಿಯಗೊಳಿಸಿ.
- ಸ್ಥಳೀಯ ಸರ್ಕಾರಿ ಸಂಸ್ಥೆಗಳ ಸಹಯೋಗದೊಂದಿಗೆ ಮ್ಯಾರಥಾನ್ ಓಟ್ ಆಯೋಜಿಸುವುದು.
- ವ್ಯಾಪಾರಿ ಸಂಘಟನೆಗಳು/ವರ್ತಕರು/ ಬೀದಿ ವ್ಯಾಪಾರಿಗಳನ್ನು ಭೇಟಿಯಾಗಿ ಜಾಗೃತಿ ಮೂಡಿಸುವುದು.
- ಸಂತೆಗಳಿಗೆ ಹೋಗಿ ಸಣ್ಣ ವ್ಯಾಪಾರಿ/ ಬೀದಿ ವ್ಯಾಪಾರಿಗಳನ್ನು ನಗದುರಹಿತ ವ್ಯವಹಾರ ಮಾಡುವಂತೆ ಪ್ರೋತ್ಸಾಹಿಸುವುದು.
- ರೈತರು ಹಾಗೂ ಕೃಷಿ ಸಂತೆಯ ವ್ಯಾಪಾರಿಗಳನ್ನು ಪ್ರೋತ್ಸಾಹಿಸುವುದು.

## 5.1. ವಿಎಲ್‌ಇ ಸಮಾಜದ ಪಾತ್ರ

- ವಿಎಲ್‌ಇ ಸಮಾಜವು ಸಂಬಂಧಿತ ಜಿಲ್ಲೆಗಳನ್ನು "ನಗದುರಹಿತ" ಜಿಲ್ಲೆಗಳಾಗಿಸಬೇಕು ಹಾಗೂ ವಿಎಲ್‌ಇಯು ಪಂಚಾಯಿತಿ/ಸ್ಥಳೀಯ ಪ್ರದೇಶಗಳನ್ನು "ನಗದುರಹಿತ"ವನ್ನಾಗಿಸಬೇಕು.

## 5.2. ಪ್ರೋತ್ಸಾಹಧನ

- ವಿಎಲ್‌ಇಗಳು ಹಾಗೂ ಸಂಬಂಧಿತ ಸಮಾಜಗಳಿಗೆ, ಪಂಚಾಯಿತಿ/ಸಮಾಜವನ್ನು ನಗದುರಹಿತವನ್ನಾಗಿ ಮಾಡಿದ್ದಕ್ಕೆ ಪುರಸ್ಕಾರಗಳನ್ನು ನೀಡಲಾಗುತ್ತದೆ.

## 5.3. ವಿಎಲ್‌ಇಗಳಿಗೆ ಸಲಹೆಗಳು

- ಪ್ರಮುಖ ಅಂಶವೆಂದರೆ ಪ್ರತಿ ವ್ಯಾಪಾರಿ/ವರ್ತಕ/ಬೀದಿ ವ್ಯಾಪಾರಿ ಡಿಜಿಟಲ್ ಹಣಕಾಸು ತಂತ್ರಜ್ಞಾನಗಳನ್ನು/ ಉಪಕರಣಗಳು ಬಳಸುವಂತೆ ಅವರನ್ನು ಸಕ್ರಿಯಗೊಳಿಸುವುದು. ಒಮ್ಮೆ ವ್ಯವಹಾರ ಕೇಂದ್ರಗಳು ನಗದುರಹಿತ ವ್ಯವಹಾರ ಸಕ್ರಿಯಗೊಳಿಸಲು ಈ ಸೌಲಭ್ಯಗಳನ್ನು ಹೊಂದಿದ ನಂತರ, ನಾಗರಿಕರು ಇದನ್ನು ಸ್ವೀಕರಿಸುವುದನ್ನು ಸುಲಭವಾಗಿ ಪರಿಹರಿಸಬಹುದಾಗಿದೆ.
- ನಾಗರಿಕರು ಸಹ ಡಿಜಿಟಲ್ ಉಪಕರಣಗಳ ಮೂಲಕವೇ ಪಾವತಿ ಮಾಡುವಂತೆ ಅವರಿಗೆ ಪ್ರೇರಣೆ/ ಪ್ರೋತ್ಸಾಹ ನೀಡಬಹುದು
- ಒಂದು ಸಮಗ್ರ ಪ್ರದೇಶ ಆಧಾರಿತ ವಿಧಾನವು, ಇತರರಿಗೆ ಕೂಡಾ ಇದನ್ನು ಸ್ವೀಕರಿಸಲು ಹಾಗೂ ಅಳವಡಿಸಿಕೊಳ್ಳಲು ಇದು ಒಂದು ಪ್ರಚೋದನೆ/ಮಾದರಿ ಆಗಬಹುದು.

## 6. ಬೆಂಬಲ

ಸಿಎಸ್‌ಸಿ–ಎಸ್‌ಪಿವಿ ಜಿಲ್ಲಾ ವ್ಯವಸ್ಥಾಪಕರು/ ರಾಜ್ಯ ತಂಡ ಮತ್ತು ಎನ್‌ಐಸಿಯ ಜಿಲ್ಲಾ ಮಾಹಿತಿ ಅಧಿಕಾರಿ (ಡಿಐಒ) ಜಿಲ್ಲಾ ಮಟ್ಟದಲ್ಲಿ, ವಿಎಲ್‌ಇ ಮತ್ತು ವಿಎಲ್‌ಇ ಸಮಾಜಕ್ಕೆ, ಬಯಸಿದ ಉದ್ದೇಶಗಳನ್ನು ಸಾಧಿಸಲು ಅವರಿಗೆ ಬೇಕಿರುವ ಬೆಂಬಲ ಒದಗಿಸುತ್ತದೆ.

**ವಿಎಲ್‌ಇಗಳು ಬಳಸಬೇಕಿರುವ ಬ್ಯಾನರ್:**






**ಹೆಚ್ಚಿನ ಮಾಹಿತಿಗಾಗಿ ಫಾರ್ ಟೋಲ್ ಫ್ರೀ ಸಂಖ್ಯೆ 18003000 3468 ಕಾಲ್ ಅಥವಾ ಇಮೇಲ್ education@csc.gov.in**

CSC e-Governance Services India Limited

CSC e-Governance Services India Limited
3rd Floor, Electronics Niketan, 6 CGO Complex,
Lodhi Road, New Delhi- 110003